**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ. ಎಸ್. ಬಸವರಾಜ |
| ತಂದೆಯ ಹೆಸರು | : | ಶಂಕರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಡಿವೈ.ಎಸ್.ಪಿ. ಗ್ರಾಮಾಂತರ ಉಪವಿಭಾಗ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 4

ದಿ: 14-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿಃ 22-05-2000 ರಿಂದ 01-08-2023 ರವರೆಗೆ ನಾನು ಡಿವೈ.ಎಸ್.ಪಿ., ಡಿ.ಸಿ. ಆರ್.ಬಿ. ದಾವಣಗೆರೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. CEN ಪೊಲೀಸ್ ಠಾಣೆಯ ಮೇಲ ಉಸ್ತುವಾರಿ ಆಗಿ ಕೆಲಸ ಮಾಡಿದ್ದೇನೆ. ದಿಃ 03-04-2021 ರಂದು ಬೆಳಿಗ್ಗೆ 10.30 ಗಂಟೆಗೆ ನಾನು ನನ್ನ ಕಛೇರಿಯಲ್ಲಿದ್ದಾಗ CEN ಪೊಲೀಸ್ ಠಾಣೆಯ ಸಿಬ್ಬಂದಿಯವರಾದ ಚಾಸಾ-7 ರವರು ಒಂದು ಪತ್ರವನ್ನು ಹಾಜರುಪಡಿಸಿದ್ದರು. ಆ ಪತ್ರದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಇದ್ದು, ಅದರಲ್ಲಿ ನನಗೆ ಪತ್ರಾಂಕಿತ ಅಧಿಕಾರಿಗಳಾಗಿ ದಾಳಿ ವೇಳೆ ಸಹಕರಿಸಲು ಪತ್ರದ ಮೂಲಕ ಕೇಳಿದರು. ಅದಕ್ಕೆ ನಾನು ಒಪ್ಪಿ ಸಹಿ ಮಾಡಿರುತ್ತೇನೆ. ಆ ಪತ್ರ ಈಗಾಗಲೇ ನಿಪಿ-4 ಅಂತ ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಪಿ-4(ಬಿ) ಅಂತ ಗುರುತಿಸುತ್ತೇನೆ. ನಂತರ ಬೆಳಿಗ್ಗೆ 10.45 ಗಂಟೆಗೆ ನಾನು CEN ಪೊಲೀಸ್ ಠಾಣೆಗೆ ಭೇಟಿ ನೀಡಿದ್ದೇನೆ. ಆಗ ಚಾಸಾ-1 ರವರು ನನಗೆ ಬಾಡಾ ಕ್ರಾಸ್ ಚಿಂದೋಡಿ ಲೀಲಾ ರಂಗ ಮಂದಿರ ಹತ್ತಿರ ಯಾರೋ

ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು ಅದಕ್ಕೆ ದಾಳಿ ಮಾಡಬೇಕು ಅಂತ ತಿಳಿಸಿದರು. ಅಲ್ಲಿ ಚಾಸಾ-1 ರವರು ಇಬ್ಬರು ಸರ್ಕಾರಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಪರಿಚಯಿಸಿದರು. ಸದರಿಯವರು ದಾಳಿ ವೇಳೆ ಪಂಚರಾಗಿ ಹಾಜರಿರುತ್ತಾರೆ ಅಂತ ತಿಳಿಸಿದರು. ನಂತರ ಬೆಳಿಗ್ಗೆ 11.00 ಗಂಟೆಗೆ ನಾನು, ಸಿಬ್ಬಂದಿ,ಚಾಸಾ-1, ಪಂಚರು, ಚಾಸಾ-7 ರಿಂದ 10 ರವರೊಂದಿಗೆ ತನಿಖೆಗೆ ಬೇಕಾದ ಕಿಟ್ , ಹ್ಯಾಂಡಿ ಕ್ಯಾಮರಾ, ಪ್ರಿಂಟರ್, ಲ್ಯಾಪಟಾಪ್, ಪೇಪರ್, ಅರಗು ಹಾಗೂ ಇತರೆ ಸಾಮಾಗ್ರಿಗಳೊಂದಿಗೆ ಠಾಣೆಯನ್ನು ಬಿಟ್ಟು ಹದಡಿ ರಸ್ತೆ ಮುಖಾಂತರ ಆವರಗೆರೆ ಮೂಲಕ ಚಿಂದೋಡಿ ಲೀಲಾ ರಂಗ ಮಂದಿರದ 150 ಮೀ. ದೂರವಿರುವ ಗಣೇಶ ದೇವಸ್ಥಾನದ ಹತ್ತಿರ ಎರಡು ಇಲಾಖಾ ಜೀಪಿನಲ್ಲಿ ಹೋಗಿ ನಿಲ್ಲಿಸಿದೆವು. ಆಗ ಸಮಯ ಬೆಳಿಗ್ಗೆ 11.30 ಗಂಟೆ ಆಗಿತ್ತು. ಅಲ್ಲಿ ಇಳಿದು ಪಂಚರಾದ ಚಾಸಾ-2 ರವರು ನನ್ನ ಅಂಗ ಶೋಧನೆ ಮಾಡಿದರು. ಚಾಸಾ-3 ರವರು ಚಾಸಾ-1 ಮತ್ತು ಇತರೆ ಸಿಬ್ಬಂದಿಗಳ ಅಂಗ ಶೋಧನೆ ಮಾಡಿದರು. ನಮ್ಮಲ್ಲಿ ಗಾಂಜಾಕ್ಕೆ ಸಂಬಂಧಿಸಿದ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ನಂತರ ಅಲ್ಲಿ ನಾವು ನೋಡಲಾಗಿ ಚಿಂದೋಡಿ ಲೀಲಾ ರಂಗ ಮಂದಿರ ಹಿಂದುಗಡೆ ಇರುವ ಎನ್.ಹೆಚ್. 48 ಪಕ್ಕದಲ್ಲಿರುವ ಒಂದು ಮಣ್ಣಿನ ರಸ್ತೆಯಲ್ಲಿ  ಇಬ್ಬರು ನಿಂತಿದ್ದು, ಒಬ್ಬರ ಕೈಯಲ್ಲಿ ಒಂದು ಚೀಲ ಇರುವ ಬಗ್ಗೆ ಕಂಡು ಬಂದಿತು. ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡುತ್ತಿರುವ ರೀತಿಯಲ್ಲಿ ಕಂಡು ಬಂದಿತು. ನಂತರ ನಾವು, ಅಧಿಕಾರಿ ಮತ್ತು ಸಿಬ್ಬಂದಿಗಳು ಹೋಗಿ ಹಿಡಿಯಲು ಪ್ರಯತ್ನಿಸಿದಾಗ ಅವರು ಓಡಿ ಹೋಗಲು ಪ್ರಯತ್ನಿಸಿದರು. ಸಿಬ್ಬಂದಿಯವರ ಸಹಾಯದಿಂದ ಅವರನ್ನು ಹಿಡಿದು ಚಾಸಾ-1 ರವರು ವಿಚಾರಿಸಿದಾಗ ಒಬ್ಬರ ಹೆಸರು ಅಂತರಾಮ ತೀರ್ಕಿ, ರಾಯಗಡ ಜಿಲ್ಲೆ, ಹಾಲಿ ವಾಸಃ ಗೋವಾ ಅಂತ ತಿಳಿಸಿದರು. ಇನ್ನೊಬ್ಬರ ಹೆಸರು ಈಗ ನಾನು ವಿಸಿಯಲ್ಲಿ ನೋಡುತ್ತಿರುವ ಮಧುರಾಜ ಇರುತ್ತಾರೆ. ನಂತರ ಅವರ ಕೈಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದರಲ್ಲಿ ಏನು ಇದೆ ಅಂತ ಕೇಳಲಾಗಿ ಅವರು ಅದರಲ್ಲಿ ಗಾಂಜಾ ಇದೆ, ಅದನ್ನು ಗೋವಾ ರಾಜ್ಯದ ಅನಿಲ ಜಾಕಬ್ (3 ನೇ ಆರೋಪಿ) ಎಂಬುವವನು ನಮಗೆ ಮಾರಾಟ ಮಾಡಲು ಕಳುಹಿಸಿಕೊಟ್ಟಿದ್ದು ನಾವು

ಅದನ್ನು ಪಾಲಿಥಿನ್ ಚೀಟಿನಲ್ಲಿ 300 ಅಥವಾ 400 ರೂಪಾಯಿಗಳಿಗೆ ಮಾರಾಟ ಮಾಡುತ್ತೇವೆ ಅಂತ ಹೇಳಿದರು. ಚಾಸಾ-1 ರವರು ಅದನ್ನು ತೆಗೆದು ತೋರಿಸಲು ಕತ್ತರಿಯನ್ನು ನೀಡಿದರು. ಅದರ ಸಹಾಯದಿಂದ ಕತ್ತರಿಸಿ ಒಳಗಡೆ ನೋಡಲಾಗಿ ಅದರಲ್ಲಿ 03 ಕಂದು ಬಣ್ಣದ ಟೇಪ್ ಸುತ್ತಿದ 03 ಪ್ಯಾಕೆಟ್ ಗಳು ಇದ್ದವು ಮತ್ತು ಇನ್ನೊಂದು ಬಿಳಿ ಬಟ್ಟೆಯಲ್ಲಿ ಗಾಂಜಾ ಇದ್ದು ಅದು ಹೂವು, ಮೊಗ್ಗಿನಿಂದ ಕುಡಿತ್ತು. ನಂತರ ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಗಾಂಜಾ ಸೊಪ್ಪು, ಹೂವು ಮೊಗ್ಗು ಕಂಡು ಬಂದಿರುತ್ತದೆ. ಅದರಿಂದ ಗಾಂಜಾ ಗಾಟು ವಾಸನೆ ಬರುತ್ತಿತ್ತು. ಪ್ರತಿಯೊಂದು ವಸ್ತುವನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಮೊದಲನೇ ಪ್ಲಾಸ್ಟಿಕ್ ಕವರ್ ನಲ್ಲಿ 2 ಕೆ.ಜಿ. 110 ಗ್ರಾಂ. ಗಾಂಜಾ ಅದನ್ನು ಮಾರ್ಕರ್ ಪೆನ್ ನಿಂದ 1 ಅಂತ ಗುರುತಿಸಲಾಯಿತು. ಎರಡನೇ ಪ್ಲಾಸ್ಟಿಕ್ ಕವರ್ ನಲ್ಲಿ 2 ಕೆ.ಜಿ. 215 ಗ್ರಾಂ. ಗಾಂಜಾ ಅದನ್ನು ಮಾರ್ಕರ್ ಪೆನ್ ನಿಂದ 2 ಅಂತ ಗುರುತಿಸಲಾಯಿತು. ಮೂರನೇ ಪ್ಲಾಸ್ಟಿಕ್ ಕವರ್ ನಲ್ಲಿ 2 ಕೆ.ಜಿ. 185 ಗ್ರಾಂ. ಗಾಂಜಾ ಅದನ್ನು ಮಾರ್ಕರ್ ಪೆನ್ ನಿಂದ 3 ಅಂತ ಗುರುತಿಸಲಾಯಿತು. ಬಿಳಿ ಬಟ್ಟೆಯಲ್ಲಿರುವ ಗಾಂಜಾವನ್ನು ಬಟ್ಟೆ ಸಮೇತ ತೂಕ ಮಾಡಿ ನೋಡಿದಾಗ ಅದು 2090 ಗ್ರಾಂ. ಇರುತ್ತದೆ. ಒಟ್ಟು 8 ಕೆ.ಜಿ. 600 ಗ್ರಾಂ. ಗಾಂಜಾ ಇತ್ತು. ಅದನ್ನು ಪಂಚರ ಸಮಕ್ಷಮ ಚೀಟಿಯನ್ನು ಅಂಟಿಸಿ ಪ್ಯಾಕ್ ಮಾಡಿ ವಿಡಿಯೋ ಮಾಡಿ ಪೋಟೋ ತೆಗೆಯಲಾಯಿತು. ಪ್ರಿಂಟರ್ ಮುಖಾಂತರ ಚೀಟಿಯನ್ನು ಅಂಟಿಸಿ ಚಾಸಾ-1 ರವರು ವಶಕ್ಕೆ ಪಡೆದುಕೊಂಡರು. ಚಾಸಾ-*1 ರವರು ಅವರನ್ನು ಅಂಗ ಶೋಧನೆ ಮಾಡಲು ಒಪ್ಪಿಗೆ ಇದೆಯಾ ಅಂತ ಆರೋಪಿತರಿಗೆ ಕೇಳಿ ಒಂದು ಪತ್ರವನ್ನು ಕೊಟ್ಟರು. ಅದಕ್ಕೆ ಆರೋಪಿತರು ಒಪ್ಪಿ ಸಹಿ ಮಾಡಿದರು. ಆರೋಪಿತರನ್ನು ಪತ್ರಾಂಕಿತ ಅಧಿಕಾರು ಅಂಗ ಶೋಧನೆ ಮಾಡಬೇಕಾ ಅಂತ ಕೇಳಿದಾಗ ಅವರು ಒಪ್ಪಿಕೊಟ್ಟಿರುತ್ತಾರೆ. ಚಾಸಾ-1 ರವರು ಸಹ ನನಗೆ ಕೋರಿಕೆ ಪತ್ರವನ್ನು ಕೊಟ್ಟರು. ಆ ಕೋರಿಕೆಯ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11( ಬಿ) ಅಂತ ಗುರುತಿಸಲಾಯಿತು. ನಂತರ ಚಾಸಾ-1 ರವರು ಆರೋಪಿತರಿಗೆ ನೀಡಿದ ನೋಟಿಸ್ಸಗಳನ್ನು ನಿಪಿ-7 ಮತ್ತು 8 ರಂತೆ ನೀಡಿರುತ್ತಾರೆ. ಆರೋಪಿತರು

ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ನಮ್ಮ ಅಂಗ ಶೋಧನೆ ಮಾಡಬಹುದು ಅಂತ ನಿಪಿ-9 ಮತ್ತು 10 ರಂತೆ ಒಪ್ಪಿಗೆ ಕೊಟ್ಟಿರುತ್ತಾರೆ. ನಿಪಿ-9 ಮತ್ತು 10 ರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ-(ಡಿ) ಮತ್ತು 10(ಡಿ) ಅಂತ ಗುರುತಿಸಲಾಯಿತು. ನಂತರ ಚಾಸಾ-1 ರವರು ನನ್ನ ಸಮಕ್ಷಮ ಆರೋಪಿ ಮಧುನಾಯ್ಕುರವರ ಅಂಗ ಶೋಧನೆ ಮಾಡಿ ನೋಡಲಾಗಿ ಪ್ಯಾಂಟ್ ನ ಬಲಗಡೆಯ ಜೇಬಿನಲ್ಲಿ 100 ಮುಖಬೆಲೆಯ 09 ನೋಟುಗಳು ಹಾಗೂ 25 ಪಾಲಿಥಿನ್ ಪ್ಯಾಕೆಟ್ ಗಳು ಇದ್ದವು. ನಂತರ ಅಂತರಾಮ ತೀರ್ಕಿರವರ ಅಂಗ ಶೋಧನೆ ಮಾಡಲಾಗಿ ಒಂದು ಕಪ್ಪು ಬಣ್ಣದ MI ಕಂಪನಿಯ Android Mobile phone ದೊರಕಿದ್ದು ಅದರಲ್ಲಿ ಏರಟೆಲ್ ಮತ್ತು ಜಿಯೋ ಕಂಪೆನಿಯ ಸಿಮ್ ಕಾರ್ಡ್ ಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡರು. ಸದರಿ ಸ್ಥಳದಲ್ಲಿ ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ಮಾಡಿ, ಪಂಚನಾಮೆಯನ್ನು ಬೆಳಿಗ್ಗೆ 11.40 ರಿಂದ 1.30 ಗಂಟೆಯವರೆಗೆ ಮಾಡಿದರು. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-12 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಸಿ) ಅಂತ ಗುರುತಿಸಲಾಯಿತು. ಆರೋಪಿ ಮಧುರಾಜರವರಿಗೆ 100 ಮುಖಬೆಲೆಯ 09 ನೋಟುಗಳು ಎಲ್ಲಿಂದ ಬಂತು ಕೇಳಿದಾಗ ಅವರು ಗಾಂಜಾ ಮಾರಾಟ ಮಾಡಿ ಗಳಿಸಿದ ಹಣ ಅಂತ ತಿಳಿಸಿದರು. ಆರೋಪಿ ತೀರ್ಕಿ ರವರಿಗೆ ಹಿಂದಿ ಭಾಷೆ ಮಾತ್ರ ಬರುತ್ತಿದ್ದರಿಂದ ನನಗೆ ಹಿಂದಿ ಮತ್ತು ಕನ್ನಡ ಭಾಷೆ ಗೊತ್ತಿರುವುದರಿಂದ ಅವರ ಭಾಷೆ ನನಗೆ ತಿಳಿಯಿತು. ಪಂಚರು ಮತ್ತು ಪೊಲೀಸ್ ಸಿಬ್ಬಂದಿಗಳಿಗೆ ಚಾಸಾ-3 ರವರು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿ ಪಂಚನಾಮೆ ಬರೆಯಲು ಸಹಾಯ ಮಾಡಿರುತ್ತಾರೆ. ಕನ್ನಡ ಭಾಷೆಯಿಂದ ಹಿಂದಿಗೆ ಅನುವಾದ ಮಾಡಿ ಆರೋಪಿಗೆ ತಿಳಿಸಿರುತ್ತೇನೆ. ಆ ದಿನ ನಾವು ವಶಪಡಿಸಿಕೊಂಡಿರುವ ವಸ್ತುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 8 ಅಂತ ಗುರುತಿಸಲಾಯಿತು. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ.5 Treasury box ನಲ್ಲಿದ್ದು ಅದನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ಹೇಳುತ್ತಾರೆ.

2. ಜಪ್ತು ಪಂಚನಾಮೆ ಮಾಡುವ ಸಂದರ್ಭದಲ್ಲಿ ಕರಡು ನಕಾಶೆಯನ್ನು ತಯಾರಿಸಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಕರಡು ನಕಾಶೆಯನ್ನು ಈಗಾಗಲೇ ನಿಪಿ-23 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-23(ಸಿ) ಅಂತ ಗುರುತಿಸಲಾಯಿತು. ಜಪ್ತು ಪಂಚನಾಮೆಯನ್ನು ಮಾಡುವ ಕಾಲಕ್ಕೆ ನಿಪಿ-13 ರಿಂದ 21 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪೋಟೋಗಳಲ್ಲಿ ಆರೋಪಿತರು, ಗಾಂಜಾ, ನಾವು, ಸಿಬ್ಬಂದಿಗಳು ಮತ್ತು ಪಂಚರು ಕಂಡು ಬರುತ್ತೇವೆ. ನಂತರ ಠಾಣೆಗೆ ಬಂದು ತನಿಖಾಧಿಕಾರಿಗಳು ಪ್ರಕರಣವನ್ನು ದಾಖಲಿಸಿ ಮುಂದಿನ ಕ್ರಮ ಜರುಗಿಸಿದರು. 1 ನೇ ಆರೋಪಿ ತಲೆ ಮರೆಸಿಕೊಂಡಿದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.) ವಕೀಲರಿಂದ 2 ನೇ ಆರೋಪಿತರ ಪರವಾಗಿ**:

3. ನಿಪಿ-4 ನಮ್ಮ ಕಛೇರಿಯಲ್ಲಿ ಸ್ವೀಕರಿಸಿದ್ದು ಇರುತ್ತದೆ. ಎಷ್ಟು ಗಂಟೆಗೆ ನಿಪಿ-4 ನ್ನು ಸ್ವೀಕರಿಸಿದ ಬಗ್ಗೆ ಸಮಯವನ್ನು ನಮೂದು ಮಾಡಿಲ್ಲ ಅಂದರೆ ನಿಜ. ನಿಪಿ-10 ರಲ್ಲಿ 2 ನೇ ಆರೋಪಿಯು ಅಂಗ ಶೋಧನೆಗಾಗಿ ಸ್ಪಷ್ಟವಾಗಿ ಒಪ್ಪಿರಲಿಲ್ಲ ಅಂದರೆ ಸುಳ್ಳು. ನಿಪಿ-10 ರಲ್ಲಿ ನನ್ನ ಹೆಸರು, ಹುದ್ದೆ ನಮೂದಾಗಿಲ್ಲ ಅಂದರೆ ನನ್ನ ಸಹಿ ಇದೆ. ಸ್ವಲ್ಪ ಹೊತ್ತಿನ ನಂತರ ಸಾಕ್ಷಿದಾರರು ಪತ್ರಾಂಕಿತ ಅಧಿಕಾರಿ ಅಂತ ನಮೂದಾಗಿದೆ ಅಂತ ಹೇಳುತ್ತಾರೆ. Protocol ಮೂಲಕ ನನ್ನ ಹೆಸರು ಮತ್ತು ಹುದ್ದೆ ನಮೂದು ಮಾಡಿಲ್ಲ. ನಿಪಿ-11 ನ್ನು ಪ್ರತ್ಯೇಕವಾಗಿ ಆರೋಪಿತರಿಗೆ ನೀಡಿಲ್ಲ. ನಿಪಿ-13 ರಿಂದ 15 ರಲ್ಲಿ ನಾನು ಮತ್ತು ಸಿಬ್ಬಂದಿಗಳು ID card ನ್ನು ಧರಿಸಿಲ್ಲ ಅಂದರೆ ಸಾಕ್ಷಿದಾರರು ಹೇಳುತ್ತಾರೆ ನಾವು ಪೊಲೀಸ್ ಅಧಿಕಾರಿಗಳು ಎಲ್ಲೂ ಕೂಡಾ ID card ನ್ನು ಧರಿಸುವುದಿಲ್ಲ. ನಿಪಿ-13 ರಿಂದ 21 ರ ಪೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದು ಅಂದರೆ ಸರಿಯಲ್ಲ. ಗಣಪತಿ ದೇವಸ್ಥಾನದ ಹತ್ತಿರ ಜನ ಮತ್ತು ವಾಹನ ಸಂಚಾರ ಇದ್ದೆ ಇರುತ್ತದೆ ಅಂದರೆ ವಾಹನಗಳು ಓಡಾಡುತ್ತವೆ ಜನರು ಇರುವುದಿಲ್ಲ. ಗಣಪತಿ ದೇವಸ್ಥಾನ ಚಿಂದೋಡಿ ಲೀಲಾ ರಂಗ ಮಂದಿರದ ಆವರಣದಲ್ಲಿಯೇ ಇರುತ್ತದೆ ಅಂದರೆ ಸರಿಯಲ್ಲ. ಆ ಗಣಪತಿ ದೇವಸ್ಥಾನದ ಪೂಜಾರಿಯವರು ದೇವಸ್ಥಾನದ ಹಿಂಭಾಗದಲ್ಲಿ ಮನೆ ಮಾಡಿಕೊಂಡು ವಾಸವಿದ್ದಾರೆ ಅಂದರೆ ಸರಿಯಲ್ಲ.

ಎನ್.ಹೆಚ್.48 ರಸ್ತೆಯು ಗಣಪತಿ ದೇವಸ್ಥಾನದ ಹತ್ತಿರ ಕೂಡುತ್ತದೆ ಅಂದರೆ ಸರಿ. ಅಲ್ಲಿ Traffic signal and CCTV camera ಇರುತ್ತದೆ ಅಂದರೆ ಸರಿಯಲ್ಲ. ಗಣಪತಿ ದೇವಸ್ಥಾನದವರು ಸಹ CCTV camera ಹಾಕಿಸಿದ್ದಾರೆ ಅಂದರೆ ಸುಳ್ಳು. ಚಿಂದೋಡಿ ರಂಗ ಮಂದಿರದಲ್ಲಿ ಸಹ CCTV camera ಹಾಕಿಸಿದ್ದಾರೆ ಅಂದರೆ ಸುಳ್ಳು. ಗಾಂಜಾ ಎಂದು ಹೇಳುವ ವಸ್ತುವಿನಲ್ಲಿ ಹೂವು ಎಷ್ಟಿತ್ತು, ಕಾಂಡ ಎಷ್ಟಿತ್ತು, ಎಲೆ ಎಷ್ಟಿತ್ತು, ಅಂತ ಪ್ರಮಾಣ ಬರೆದಿಲ್ಲ ಅಂದರೆ ನಿಖರವಾಗಿ ಹೇಳಲಾಗುವುದಿಲ್ಲ. ಅಮಾನತ್ತು ಮಾಡಿರುವಂತಹ ವಸ್ತು ಅದರ ಮೇಲೆ ಇರುವ ಬಟ್ಟೆ ಎಷ್ಟಿತ್ತು ಅಂತ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಅಂದರೆ ಪಂಚನಾಮೆಯನ್ನು ಮಾಡುವಾಗ ಆ ಬಟ್ಟೆಯನ್ನು ತೆಗೆದು ನಾವು ತೂಕ ಮಾಡಿದೆವು. ಆ ಸಮಯದಲ್ಲಿ ನಾವು ವಿಡಿಯೋ ಮಾಡಿಲ್ಲ ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ಪಂಚನಾಮೆ ಮಾಡುವ ಕಾಲಕ್ಕೆ ಗಾಂಜಾ ಎಂದು ಹೇಳುವ ವಸ್ತುವನ್ನು ತೂಕ ಮಾಡುವಾಗ ಅದಕ್ಕೆ ಯಾವುದೇ ಬಟ್ಟೆಯನ್ನು ಸುತ್ತಿರಲಿಲ್ಲ. ಪಂಚರಾಗಿ ಸ್ವತಂತ್ರ ಸಾಕ್ಷಿದಾರರನ್ನಾಗಿ ನೇಮಕ ಮಾಡಲು ಪ್ರಯತ್ನಿಸಿಲ್ಲ ಅಂದರೆ ಸರಿಯಲ್ಲ. ಸ್ವತಂತ್ರ ಪಂಚರನ್ನು ತನಿಖಾಧಿಕಾರಿಗಳು ನೇಮಿಸಿದರು. ಆ ಸ್ಥಳದಲ್ಲಿ High way traffic police and squad ಇರುತ್ತಾರೆ ಅಂದರೆ ಆ ಸಮಯದಲ್ಲಿ ಯಾರೂ ಇರಲಿಲ್ಲ. Sample seal ನ್ನು ಹಾಕಿದ ನಂತರ ಅದನ್ನು ತನಿಖಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ತನಿಖಾಧಿಕಾರಿಗಳು ಮುಂದಿನ ಕ್ರಮ ಜರುಗಿಸಿರುತ್ತಾರೆ. Sample seal ಮು.ಮಾ.1 ರಿಂದ 8 ರಲ್ಲಿ ಕಾಣುತ್ತಿಲ್ಲ ಅಂದರೆ ಸರಿಯಲ್ಲ. ಮು.ಮಾ.1 ರಿಂದ 8 ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದು ಇರುತ್ತದೆ ಮತ್ತು ಅವುಗಳನ್ನು ಆರೋಪಿತರಿಂದ ಅಮಾನತ್ತುಪಡಿಸಿಲ್ಲ ಅಂದರೆ ಸರಿಯಲ್ಲ. ಅಲ್ಲಿ ಆರೋಪಿತರಿಗೆ Arrest memo ತಯಾರಿಸಿ ಅವರ ಸಹಿಯನ್ನು ಪಡೆದುಕೊಂಡಿಲ್ಲ. ನಮಗೆ ಅನುಕೂಲವಾಗುವ ರೀತಿಯಲ್ಲಿ ನಿಪಿ-13 ರಿಂದ 23 ನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಯಾವುದೇ ಗಾಂಜಾ, ಹಣ ಮತ್ತು ವಸ್ತುವನ್ನು ಅಮಾನತ್ತು ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಯು ಖಾಯಂ ಕೂಡ್ಲಿಗಿ ತಾಲ್ಲೂಕು, ಬಂಡೆಬಸಾಪುರದ ತಾಂಡಾ

ಗ್ರಾಮದ ನಿವಾಸಿಯಾಗಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.